ರಾಜಾಜಿನಗರ ಪ್ರದೇಶದಲ್ಲಿ ಕುಡಿಯುವ ನೀರಿನ ಅಭಾವದ ಬಗ್ಗೆ.

೨. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).–ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ರಾಜಾಜಿನಗರದ ನಾಗರೀಕರು ಕಳೆದ ೮-೧೦ ತಿಂಗಳುಗಳಿಂದ ಕುಡಿಯುವ ನೀರಿಲ್ಲದೇ ತೊಂದರೆಗೊಳಗಾಗಿರುವುದು ಸರ್ಕಾರದವರೆ ಗಮನಕ್ಕೆ ಬಂದಿದೆಯೇ ?

ಆ) ತಿಪ್ಪಗೊಂಡನಹಳ್ಳಿ ಜಲಾಶಯದಲ್ಲಿ ನೀರಿಲ್ಲದಿರುವುದರಿಂದ ಮತ್ತು ಕಾವೇರಿ ಎರಡನೇ ಹಂತದಿಂದ ಕೆಲವು ಪ್ರದೇಶಗಳಿಗೆ ಪಂಪ್ಮಿಂಗ್ ಮಾಡಿ ಪಶ್ಚಿಮ ಕಾರ್ಡ್ ರೋಡ್‌ಗೆ ನೀರೇ ಸಿಗದಿರುವ ಪರಿಸ್ಥಿತಿ ಬಂದಿರುವುದರಿಂದ ಈ ಜನರಿಗೆ ಪರಿಹಾರ ಒದಗಿಸಲು ಕಾರ್ಯಕ್ರಮಗಳನ್ನೇನಾದರೂ ಕೈಗೊಂಡಿರುವರೆ ಹಾಗಿದ್ದರೆ ಈ ಕಾರ್ಯಕ್ರಮಗಳೇನು ?

ಇ) ಕಾವೇರಿ ನೀರನ್ನು ಅರ್ಕಾವತಿ ನೀರಿನ ಪ್ರದೇಶಗಳಿಗೆ ಒದಗಿಸುವಂತಾಗಲು ಬೆಂಗಳೂರು ದಕ್ಷಿಣದಿಂದ ಕೇತಮಾರನಹಳ್ಳಿ ರಿಸರ್ವಾಯರ್‌ಗೆ ೩೬ ''ಕೊಳವೆಯನ್ನು ಹಾಕಿಸಬೇಕೆಂದು ಶಾಸಕರು ಇತರರು ಒತ್ತಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಈ) ಈ ಸಮಸ್ಯೆಯ ಬಗ್ಗೆ ಸರ್ಕಾರ ಕೈಗೊಂಡಿರುವ ನಿರ್ಧಾರವೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಮತ್ತು ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).–

ಅ) ಬಂದಿದೆ.

ಆ) ಕಳೆದ ಕೆಲವಾರು ವರ್ಷಗಳ ಮಳೆಯು ವಿಫಲತೆಯಿಂದಾಗಿ ನಗರದ ಅರ್ಕಾವತಿ ವಲಯದಲ್ಲಿ ನೀರಿನ ಅಭಾವ ಉಂಟಾಗಿದೆ. ಈ ಪರಿಸ್ಥಿತಿಯನ್ನು ಎದುರಿಸಲು ಈ ಕೆಳಗೆ ತಿಳಿಸಿರುವ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ.

೧) ಕಾವೇರಿ ವಲಯದ ಪ್ರದೇಶಗಳಲ್ಲಿನ ನೀರು ಸರಬರಾಜು ಅವಧಿಯನ್ನು ಕನಿಷ್ಠಗೊಳಿಸಿ ಆದಷ್ಟು ಹೆಚ್ಚಿನ ಪ್ರಮಾಣದಲ್ಲಿ ಈ ನೀರನ್ನು ಅರ್ಕಾವತಿ ವಲಯಕ್ಕೆ ಸರಬರಾಜು ಮಾಡಲಾಗುತ್ತಿದೆ

೨) ದಿ. ೨೩-೧೨-೮೫ರಿಂದ ಜಾರಿಗೆ ಬಂದಿರುವಂತೆ ಅರ್ಕಾವತಿ ವಲಯದ ಕೆಲವು ಪ್ರದೇಶಗಳಿಗೆ ದಿನ ಬಿಟ್ಟು ದಿನ ನೀರು ಸರಬರಾಜು ಮಾಡಲಾಗುತ್ತಿದೆ.

೩) ಗೃಹೇತರ ಬಳಕೆಗೆ ನೀರಿನ ಸಂಪರ್ಕ ಕೊಡುವುದನ್ನು ೨೧-೧೨-೮೫ ರಿಂದ ನಿಲ್ಲಿಸಲಾಗಿದೆ.

೪) ನಗರದಲ್ಲಿ ಮಂಡಳಿಯ ವತಿಯಿಂದ ಈವರೆವಿಗೆ ಒಟ್ಟು ೬೫೪ ಕೊಳವೆ ಬಾವಿಗಳನ್ನು ಕೊರೆಸಿದ್ದು ಅವುಗಳಲ್ಲಿ ೧೭೮ ಬಾವಿಗಳನ್ನು ರಾಜಾಜಿನಗರ ಕ್ಷೇತ್ರವೊಂದರಲ್ಲಿ ಕೊರೆಸಲಾಗಿದೆ. ಇನ್ನೂ ಅಧಿಕ ಕೊಳವೆ ಬಾವಿಗಳನ್ನು ಅವಶ್ಯಕತೆಯ ಮೇರೆಗೆ ಕೊರೆಸಲಾಗುವುದು.

೫) ಸಾಧ್ಯವಾದ ಕಡೆಗಳಲ್ಲೆಲ್ಲಾ ಸಾರ್ವಜನಿಕ ನೀರಿನ ಬಾವಿಗಳನ್ನು ಶುಚಿಗೊಳಿಸಲು ಬಳಕೆಗೆ ಉಪಯೋಗವಾಗುವಂತೆ ಮಾಡಲಾಗುತ್ತಿದೆ.

೬) ದಿನ ಬಿಟ್ಟು ದಿನ ನೀರು ಸರಬರಾಜಿರುವ ವಲಯದಲ್ಲಿ ನೀರು ಸರಬರಾಜು ಮಾಡಲೆಂದೇ ೨೫ ಲಾರಿಗಳ ದಂಡೊಂದನ್ನು ನಿಯೋಜಿಸಲಾಗಿದೆ.

೭) ಸಿಸ್ಸಿ ಪೈಪ್ಪಿನಿಂದ ಮಾಗಡಿ ರಸ್ತೆ ಒವರ್ ಹೆಡ್ ಟ್ಯಾಂಕ್‌ವರೆವಿಗೂ ಕಾವೇರಿ ನೀರನ್ನು ಅರ್ಕಾವತಿ ವಲಯಕ್ಕೆ ವರ್ಗಾಯಿಸಲು ೪೮೦ ಮಿ. ಮಿ. ವ್ಯಾಸದ ಕೊಳವೆಯನ್ನು ತ್ವರಿತಗತಿಯಲ್ಲಿ ಹಾಕಲಾಗುತ್ತಿದೆ.

೮) ನೀರು ಸೋರುವಿಕೆಯನ್ನು ಶೀಘ್ರದಲ್ಲಿಯೇ ತಡೆಗಟ್ಟಲು ವಿಶೇಷ ದಳವೊಂದನ್ನು ರಚಿಸಲಾಗಿದೆ ಹಾಗೂ ಈ ದಳವು ಕಾರ್ಯೋನ್ಮುಖವಾಗಿದೆ.

೯) ನೀರಿನ ಅಭಾವ ಪೀಡಿತ ಪ್ರದೇಶಗಳಿಗೆ ಮಂಡಳಿಯ ಅಧಿಕಾರಿಗಳು ಪಾದಯಾತ್ರೆ ನಡೆಸಿ ಸಾಧ್ಯವಿರುವೆಡೆಗಳಲ್ಲಿ ಸರಬರಾಜು ವ್ಯವಸ್ಥೆಯಲ್ಲಿ ಕಂಡುಬರುವ ಲೋಪದೋಷಗಳನ್ನು ಸೂಕ್ತವಾಗಿ ಸರಿಪಡಿಸಲಾಗುತ್ತಿದೆ.

೧೦) ತೊಂದರೆಗೀಡಾದ ಪ್ರದೇಶಗಳಲ್ಲಿ ಸಮನಾದ ಜಲ ವಿತರಣೆಯಾಗುವಂತೆ ನೋಡಿಕೊಳ್ಳಲು ಅಧೀಕ್ಷಕ ಅಭಿಯಂತರರ ಮಟ್ಟದಲ್ಲಿರುವ ಅಧಿಕಾರಿಯನ್ನು ವಿಶೇಷಾಧಿಕಾರಿಯಾಗಿ ನಿಯಮಿಸಲಾಗಿದೆ

೧೧) ಶಿಂಷಾ ನದಿಯಿಂದ ನಗರಕ್ಕೆ ನೀರು ಸರಬರಾಜು ಮಾಡುವ ಕಾರ್ಯವು ತೀವ್ರಗತಿಯಲ್ಲಿ ನಡೆಯುತ್ತಿದೆ.

೧) ಬಂದಿದೆ.

೪) ಪ್ರಸುತ್ತವಾಗಿ ಕಾವೇರಿ ಎರಡನೇ ಹಂತದಿಂದ ಹೊಸಹಳ್ಳಿ ಮೂಲಕ ಕೇತಮಾರನ ಹಳ್ಳಿ ಜಲಾಶಯಕ್ಕೆ ಕಾವೇರಿ ನೀರನ್ನು ಪೂರೈಸಲಾಗುತ್ತಿದೆ. ೩೬ ಅಂಗುಲ ಕೊಳವೆಯನ್ನು ಬೆಂಗಳೂರು ದಕ್ಷಿಣದಿಂದ ಕೇತಮಾರನಹಳ್ಳಿಗೆ ಹಾಕಲು ಕಾವೇರಿ ಮೂರನೇ ಹಂತದ ಯೋಜನೆಯಡಿಯಲ್ಲಿ ನಿಯೋಜಿಸಲಾಗಿದೆ.

ಇದು ಹಿಂದೆ ಒಂದು ಸಾರಿ ಕೇಳಿದ್ದ ಪ್ರಶ್ನೆ ಇದಕ್ಕೆ ಆಗಲೇ ಉತ್ತರ ಕೊಟ್ಟಿದ್ದೇನೆ. ನಿನ್ನೆ ಕೂಡ ಹೇಳಿದ್ದೇನೆ, ಪುನಃ ಹೇಳಬೇಕೆಂದರೆ ಹೇಳುತ್ತೇನೆ. ಆದರೆ ನಿನ್ನೆ ಹೇಳಿದ್ದಕ್ಕಿಂತ ಹೆಚ್ಚು ಹೇಳುವುದಕ್ಕೆ ಆಗುವುದಿಲ್ಲ. ಸ್ವಲ್ಪ ದಿನ ಕಾದು ನೋಡೋಣ, ಮತ್ತೆ ತಮ್ಮನ್ನು ಸಭೆಗೆ ಕರೆದು ಭೇಟಿ ಮಾಡುತ್ತೇನೆ, ಆಗ ಕುಳಿತುಕೊಂಡು ತೀರ್ಮಾನ ಮಾಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೇಳಿದ್ದೀರಿ ನಿಜ, ಮಂತ್ರಿಗಳು ಬಹಳ ದೀರ್ಘವಾಗಿ ನಿನ್ನೆ ದಿವಸ ಉತ್ತರಿಸಿದ್ದಾರೆ. (ಅ) ಪ್ರಶ್ನೆಗೆ ಉತ್ತರವಾಗಿ ೨ನೇಯದರಲ್ಲಿ ದಿನಬಿಟ್ಟು ದಿನ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ರಾಜಾಜಿನಗರ ಪಲಯಕ್ಕೆ ಅರ್ಕಾವತಿ ನೀರನ್ನು ಕೈಬಿಟ್ಟು ಕಾವೇರಿ ನೀರು ತರುವುದಕ್ಕೆ ಪ್ರಯತ್ನ ನಡೆಯುತ್ತಿದೆ ಎಂದು ಹೇಳಿದ್ದಾರೆ. ಆ ಕೆಲಸವನ್ನು ವೇಗವಾಗಿ ಮಾಡುವುದರ ಜೊತೆಗೆ ದಿನಬಿಟ್ಟು ದಿನ ನೀರು ಬಿಡುವ ಪದ್ಧತಿಯನ್ನು ಇಡೀ ಬೆಂಗಳೂರು ನಗರಕ್ಕೆ ಅನ್ವಯವಾಗುವಂತೆ ಮಾಡಿ. ಆ ರೀತಿ ಮಾಡುವುದರಿಂದ ಎಲ್ಲಾ ಕಡೆಗೆ ನೀರನ್ನು ಸಮಾನವಾಗಿ ಹಂಚಿದಂತಾಗುವುದಿಲ್ಲವೆ ? ಆಗ ನಿಮಗೆ ಸಾವಧಾನವಾಗುವುದಿಲ್ಲವೇ ಆ ರೀತಿ ಕಾರ್ಯಕ್ರಮ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್. — ಮಾನ್ಯ ಸದಸ್ಯರಿಗೆ ಸಭೆಯನ್ನು ಕರೆಯುತ್ತೇನೆಂದು ಹೇಳಿದ್ದೇನೆ. ಅವತ್ತು ಮಾತನಾಡೋಣ.

ಅಧ್ಯಕ್ಷರು.—ನಿಮ್ಮನ್ನು ಕರೆಸುತ್ತೇನೆಂದು ಹೇಳಿದ್ದಾರಲ್ಲ ಬಿಡಿ.

ಶ್ರೀ ಎಂ. ಎಸ್. ಕೃಷ್ಣನ್.—ನಿನ್ನೆ ದಿವಸ ೧೦೯ ಬೋರ್‌ವೆಲ್ ಎಂದು ಹೇಳಿದ್ದರು. ಇಲ್ಲಿ ಕೊಟ್ಟಿರತಕ್ಕ ಉತ್ತರವನ್ನು ನೋಡಿದರೆ ೧೭೮ ಎಂದು ಇದೆ. ಇದರಲ್ಲಿ ಯಾವುದು ಸರಿ ಯಾವುದು ತಪ್ಪು ?

ಶ್ರೀ ಎ. ಲಕ್ಷ್ಮೀಸಾಗರ್.—ಲೇಟೆಸ್ಟ್ ಫಿಗರ್ ಕೊಡುತ್ತೇನೆ. ಇದು ಹಿಂದೆ ತಯಾರಿಸಿದ್ದ ಉತ್ತರ.

ಶ್ರೀ ಎಂ. ಎಸ್. ಕೃಷ್ಣನ್.—೩೬ ಅಂಗುಲದ ಕೊಳವೆಯನ್ನು ಬೆಂಗಳೂರು ದಕ್ಷಿಣದಿಂದ ಕೇತಮಾರನಹಳ್ಳಿಗೆ ಹಾಕಲು ಕಾವೇರಿ ಮೂರನೇ ಹಂತದ ಯೋಜನೆಯಡಿಯಲ್ಲಿ ನಿಯೋಜಿಸಲಾಗಿದೆ ಎಂದು ಹೇಳಿದ್ದೀರಿ. ಅದರ ಬಗ್ಗೆ ತಕ್ಷಣ ತೀರ್ಮಾನ ಮಾಡಿ ಜಾರಿಗೆ ತರುತ್ತೀರಾ ?

ಅಧ್ಯಕ್ಷರು.—೧೧ನೇ ತಾರೀಖು ಸಭೆ ಇದೆ, ಅಲ್ಲಿ ಹೇಳಿ.